ಬಾಲದ ಬಿಳಿಹಕ್ಕಿಯೇ ಇಲ್ಲಿನ ಮುಖ್ಯ ಆಕರ್ಷಣೆ. ಈ ಹಕ್ಕಿ ಹೆಚ್ಚು ಹೊತ್ತು ನೀರ ಬಳಿ ನಿಲ್ಲುವುದೇ ಇಲ್ಲ. ಹಾಗೆ ಬಂದು ಹೀಗೆ ನಿಂತು ಭರ್ರೆಂದು ಮಿಂಚಿನಂತೆ ನೀರು ಮುಟ್ಟಿ ಓಡುತ್ತದೆ. ಬಲು ಚಂಚಲ ಮತ್ತು ನಾಚಿಕೆ ಸ್ವಭಾವದ ಈ ಹಕ್ಕಿಯ ಸೆರೆ ಹಿಡಿಯುವುದೇ ಎಲ್ಲರ ಮುಖ್ಯ ಆಸೆಯಾಗಿರುತ್ತದೆ. ಕ್ಯಾಮೆರಾ ಅದರ ಕಡೆ ಹಿಡಿದು ಫೋಕಸ್ ಮಾಡುವಷ್ಟರಲ್ಲೇ ಅದು ಮಂಗ ಮಾಯವಾಗಿರುತ್ತದೆ. ಸಾಧಾರಣವಾಗಿ ಸಂಜೆಯ ಹೊತ್ತಿಗೆ ಇದು ಹೆಚ್ಚು ಆಕ್ಟಿವ್ ಆಗುವಂಥದ್ದು. ಆಗ ಬೆಳಕು ಕಡಿಮೆ ಇರುವ ಕಾರಣ ಇದರ ಸ್ಪಷ್ಟ ಚಿತ್ರ ತೆಗೆಯುವುದು ಬಲು ಸವಾಲಿನ ಕೆಲಸ.



ಪಟಗಾರರಿಗಿಂತ ಹಕ್ಕಿಗಳ ಚೆಲುವು ಮತ್ತು ಕುಣಿದಾಟವನ್ನು ಹೆಚ್ಚೆಚ್ಚು ಗಮನಿಸಿ ಖುಷಿ ಪಡುವವರು ಎಂದರೆ ಹಕ್ಕಿ ವೀಕ್ಷಕರು. ನಾವು ಕ್ಯಾಮೆರಾದ ಕತ್ತು, ಮೂತಿ ಅತ್ತಿತ್ತ ತಿರುಗಿಸುತ್ತಾ ಇಲ್ಲ ಸಲ್ಲದ ಸರ್ಕಸ್ ಮಾಡುತ್ತಾ ಒದ್ದಾಡುತ್ತಿದ್ದರೆ ಇವರು ತಣ್ಣಗೆ ಎಲ್ಲವನ್ನೂ ಆಸ್ವಾದಿಸಿರುತ್ತಾರೆ. ಜಗತ್ತಿನ ಜನರಿಗೆ ಹಕ್ಕಿಯ ಉತ್ತಮ ಚಿತ್ರ ತೆಗೆದು ತೋರಿಸಿ ಶಬ್ಬಾಸ್‌ಗಿರಿ ಪಡೆಯುವ ದುರಾಸೆಯ ಹಾದಿಯಲ್ಲಿರುವ ನಾವು ಪಡೆಯುವ ಆನಂದ ಖಂಡಿತಾ ಇವರಿಗಿಂತ ಕಮ್ಮಿ ಪ್ರಮಾಣದ್ದು. ಕಣ್ಣು ನೋಡಿ ದಾಖಲಿಸಿಕೊಳ್ಳುವ ಸಮೃದ್ಧ ದೃಶ್ಯ ಜಗತ್ತಿನ ಮುಂದೆ ಕ್ಯಾಮೆರಾ ಕಣ್ಣು ನೋಡುವ ಚಿತ್ರ ಬಲು ಚಿಕ್ಕ ಗಾತ್ರದ್ದು.

ಹಸಿರು ವರ್ಣದ ಪಾರಿವಾಳ ಜಾತಿಗೆ ಸೇರಿದ ಹರಳು ಚೋರೆಹಕ್ಕಿ ನನಗೆ ಬಲು ಪ್ರಿಯವಾದ ಹಕ್ಕಿ, ಇದರ ಹಸಿರು ಮೈಬಣ್ಣ, ಕೆಂಪು ಕೊಕ್ಕು, ಮೈಮೇಲಿನ ಸುಂದರ ಚಿತ್ರಕಲೆ ಮನಸ್ಸಲ್ಲಿ ಇಳಿದು ಹೋಗುತ್ತದೆ. ಸುತ್ತ ಬೆಳೆದ ಹಸಿರು ಹುಲ್ಲಿನ ನಡುವೆ ಕೀಟ ಮತ್ತು ಹುಲ್ಲಿನ ಬೀಜಗಳನ್ನು ಆರಿಸಿ ತಿನ್ನುವ ಈ ಪಾರಿವಾಳ ಬೇರೆ ಹಕ್ಕಿಗಳಂತೆ ಸಂಪೂರ್ಣ ಸ್ನಾನ ಮಾಡದೆ ಕೇವಲ ನೀರು ಕುಡಿದು ಕೈ ಕಾಲು ತೊಳೆದುಕೊಂಡು ಒಮ್ಮೆಲೇ ಗಾಬರಿ ಬಿದ್ದವರಂತೆ ಕಾಡಿನ ಕಡೆ ಓಡಿ ಹೋಗುತ್ತದೆ. ಉದ್ದ ಜೋಲಾಡುವ ಬಾಲದ ಚತುರ ಕಾಜಾಣ ಇಲ್ಲಿನ ರೌಡಿ ಹಕ್ಕಿ. ಕುವೆಂಪು ಅವರಿಗೆ ಬಲು ಪ್ರಿಯವಾಗಿದ್ದ ಪಕ್ಷಿ. ಅಸಾಧಾರಣ ಧೈರ್ಯದ ಈ ಆಸಾಮಿ ಬಂದರೆ ಎಲ್ಲರೂ ದಾರಿ ಬಿಟ್ಟು ನಿಲ್ಲಬೇಕು. ಎಲ್ಲರನ್ನೂ ಒಮ್ಮೆಗೇ ಹೆದರಿಸಿ ಓಡಿಸುವ ಕಾಜಾಣ ತಾನೂ ಕೂಡ ಒಂದು ಕ್ಷಣ ಹೆಚ್ಚಿಗೆ ಇಲ್ಲಿ ನಿಲ್ಲುವುದಿಲ್ಲ. ಪದೇ ಪದೇ ಮಿಂಚಿನಂತೆ ಹಾರಿ ಬಂದು ಅದೇ ವೇಗದಲ್ಲೇ ನೀರನ್ನು ಹೆಕ್ಕಿ, ಯುದ್ಧ ವಿಮಾನದಂತೆ ಮಾಯವಾಗುತ್ತದೆ.

ಮಾರನೆಯ ದಿನ ಸಂಜೆ ಕಾದು ನಿಂತಾಗ ಯಾವ ಹಕ್ಕಿಗಳೂ ನೀರಿಗೆ ಬರಲಿಲ್ಲ. ಕೊನೇ ಪಕ್ಷ ಹತ್ತಾರು ಸಲ ಒಲ್ಲೆ ಎಂದರೂ ಬಂದು ಕಾಡುವ ಪಿಕಳಾರಗಳೂ, ಬೆಳ್ಗಣ್ಣ ಹಕ್ಕಿಗಳೂ ಸುಳಿಯಲಿಲ್ಲ. ಸ್ನಾನದ ಮನೆಯಲ್ಲಿ ಒಮ್ಮೆಗೇ ದಿವ್ಯಮೌನ ನೆಲೆಸಿ ಹೋಯಿತು. ಸುತ್ತಮುತ್ತಲ ಕಾಡಿನ ಕಡೆಯಿಂದಲೂ ಒಂದು ಹಕ್ಕಿಯ ಕಿರುದನಿಯೂ ಕೇಳಲಿಲ್ಲ. ಯಾಕೆ ಸಡನ್ನಾಗಿ ಹೀಗಾಗಿ ಹೋಯಿತು? ಎಂದು ಯೋಚಿಸುತ್ತಾ ನಿಂತೆವು. ಅಷ್ಟರಲ್ಲಿ ಒಂದು ಬಿಳಿಯ ಹಕ್ಕಿ ಮಾತ್ರ ಬಂದು ಕೊಂಬೆಯ ಮೇಲೆ ಕೂತುಕೊಂಡಿತು. ಯಥಾಪ್ರಕಾರ ಇದರ ಚಿತ್ರಗಳನ್ನು ಚಕಚಕನೆ ಸೆಳೆದು ಹಾಕಿದೆವು. ಆದರೆ, ನಮ್ಮ ನಿರೀಕ್ಷೆಗೆ ವ್ಯತಿರಿಕ್ತವಾಗಿ ಕೂತ ಆ ಹಕ್ಕಿ ಹತ್ತು ನಿಮಿಷವಾದರೂ ಹಾರಿ ಹೋಗದೆ ಬೆಪ್ಪನಂತೆ ಕೂತಿತ್ತು. ಹಾಳಾದ್ದು ಇತ್ತ ನೀರಿಗೂ ಇಳಿಯುತ್ತಿಲ್ಲ. ನಮಗೆ ಈ ಹಕ್ಕಿಯ ವರ್ತನೆ ಒಗಟಾಗಿ ಕಂಡಿತು.

ಒಂದೂ ಹಕ್ಕಿಯೂ ಇತ್ತ ಸುಳಿಯದೆ, ಬಂದ ಈ ಹಕ್ಕಿಯೂ ಎದ್ದು ಹೋಗದೆ ನಮ್ಮ ಚಿತ್ರೀಕರಣ ನಿಂತು ಹೋಯಿತು. ಆಗ ನಾನು ನ್ಯಾಚುರಲಿಸ್ಟ್ ವಿನಾಯಕನ ಕರೆದು ಏನು ಕಥೆಯಿದು ಅಣ್ಣ? ಯಾಕೆ ಬರ್ಡ್ ಬಾತಿಂಗ್ ಸೈಲೆಂಟಾಗಿ ಹೋಯಿತು? ಈ ಹಕ್ಕಿ ಬಂದ ಮೇಲೆ ಸ್ಮಶಾನ ಮೌನ ನೆಲೆಸಿದೆಯಲ್ಲ? ಏನು ವಿಷಯ ಎಂದೆ. ನನ್ನ ಪ್ರಶ್ನೆಗೆ ನಕ್ಕ ವಿನಾಯಕ 'ಸಾರ್ ಇದು ಡೇಂಜರಸ್ ಶ್ರೈಕ್ ಹಕ್ಕಿಯಲ್ಲವೇ? ಇದರ ಮುಖ್ಯ ಆಹಾರವೇ ಹಕ್ಕಿ ಬೇಟೆ ಸರ್. ಈ ಹಕ್ಕಿ ಹೈಡಿಗೆ ಬಂದರೆ ಯಾವ ಬರ್ಡ್ಸ್ ಕೂಡ ಈ ಕಡೆ ತಲೆ ಹಾಕಲ್ಲ. ಎಲ್ಲಾ ಹೆದರಿ ಎಲ್ಲೆಲ್ಲೋ ಓಡಿ ಹೋಗಿ ಅಡಗಿಕೊಂಡಿರ್ತಾವೆ. ಇವನು ಎದ್ದು ಹೋಗೋ ತನಕ ಹಕ್ಕಿಗಳು ತುಟಿಕ್ ಪಿಟಿಕ್ ಎನ್ನದೆ ಬಾಲ ಮುದುರಿಕೊಂಡು ಬಚ್ಚಿಟ್ಟುಕೊಂಡಿರ್ತಾವೆ. ಇನ್ನೂ ಸೈ ಬಿಡಿ. ಇವತ್ತಿನ ಕಥೆ ಮುಗೀತು' ಎಂದನು.

●